## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

## S.C. No. 1370/2020

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ನಾಗರಾಜು | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಲೇಟ್ ಚಿಕ್ಕಮುನಿಯಪ್ಪ | 16 | 11 |
| ವಯಸ್ಸು | 51 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **25.03.2026.** | |
| ಉದ್ಯೋಗ | ವ್ಯಾಪಾರ | | |
| ವಾಸ ಸ್ಥಳ | ಲೆಗ್ಗೆರೆ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಪ್ರಸನ್ನ ಕುಮಾರ್ ನನ್ನ ಸ್ನೇಹಿತ. ಸುಮಾರು 5 ವರ್ಷಗಳ ಹಿಂದೆ ಪ್ರಸನ್ನ ಕುಮಾರ್ ಮರಣ ಹೊಂದಿದ್ದು ಅವರ ಮೃತದೇಹವು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಇದ್ದು ನಾನು ಆಸ್ಪತ್ರೆಯ ಬಳಿ ಹೋದಾಗ ಸಂಜೆ 6.00 ಗಂಟೆ ಆಗಿತ್ತು. ಮೃತದೇಹವನ್ನು ಪಡೆದುಕೊಳ್ಳಲು ಒಂದು ದಾಖಲೆಗೆ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಮೃತನ ದೇಹದ ಮೇಲೆ ಗಾಯಗಳು ಆಗಿರುವುದನ್ನು ನಾನು ನೋಡಿರುವುದಿಲ್ಲ. ಪ್ರಸನ್ನ ಕುಮಾರ್ ಅವರ ಸ್ನೇಹಿತರು ಕರೆದುಕೊಂಡು ಹೋಗಿ ಏನೋ ಮಾಡಿದ್ದಾರೆ ಎಂದು ಚಾಸಾ.8 ರವರು ನನಗೆ ತಿಳಿಸಿರುತ್ತಾರೆ. ಈಗ ನೋಡಿದ ನಿಶಾನೆ.ಪಿ. 19 ರ ಶವ ಪಂಚನಾಮೆಯನ್ನು ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿ.ಪಿ.19(ಬಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಓದು ಮತ್ತು ಬರಹ ಬರುತ್ತದೆ. ನಿ.ಪಿ. 19 ಕ್ಕೆ ನಾನು ಸಹಿ ಮಾಡುವಾಗ ಬರವಣಿಗೆ ಮಾಡಿದ ಬಗ್ಗೆ ನಾನು ಗಮನಿಸಲಿಲ್ಲ. ನಾನು ಸಾಮಾನ್ಯವಾಗಿ ಓದಿ ಸಹಿ ಮಾಡುತ್ತೇನೆ ಎಂದರೆ ಸರಿ. ಓದಿ

ತಿಳಿದುಕೊಂಡು ಸಹಿ ಮಾಡಲು ತೊಂದರೆ ಇರಲಿಲ್ಲ. ದಿ:18.02.2020 ರಂದು ಸಂಜೆ 4.00 ಗಂಟೆಗೆ ಪೊಲೀಸರು ಶವಾಗಾರದ ಬಳಿ ನನ್ನನ್ನು ಮತ್ತು ಚಾಸಾ. 15 ಮತ್ತು 17 ರವರನ್ನು ಕರೆಸಿ ಮೃತ ಪ್ರಸನ್ನ ಕುಮಾರ್ ರವರ ಶವವನ್ನು ತೋರಿಸಿ ಶವ ಪಂಚನಾಮೆ ಮಾಡುವ ಸಂಬಂಧ ನಮ್ಮ ಸಮಕ್ಷಮ ಸಂಜೆ 4.15 ರಿಂದ 6.15 ರವರೆಗೆ ನಿ.ಪಿ.19 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸುಳ್ಳು. ನಾನು ಶವವನ್ನು ನೋಡಿದಾಗ ಮೃತನ ಬಾಯಿಯಲ್ಲಿ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು. ದೇಹದ ಮೇಲೆ ತರಚಿದ ಹಾಗೂ ರಕ್ತ ಹೆಪ್ಪುಗಟ್ಟಿದ ಗಾಯಗಳು ಇದ್ದವು ಎಂದರೆ ಸರಿಯಲ್ಲ. ಆರೋಪಿಗಳು ಪ್ರಸನ್ನ ಕುಮಾರ್ ರವರು ಮೊಬೈಲ್ ಕಳ್ಳತನ ಮಾಡಿದ್ದಾರೆ ಎಂದು ಕರೆದುಕೊಂಡು ಹೋಗಿ ಹಲ್ಲೆ ಮಾಡಿ, ಕೊಲೆ ಮಾಡಿದ್ದಾರೆ ಎಂದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ನಿ.ಪಿ.19 ರ ಶವ ಪಂಚನಾಮೆಯ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.